International Journal of Kannada Research
www.kannadajournal.com

**ISSN: 2454–5813**
IJKR 2020; 6(1): 74-79
© 2020 IJKR
www.kannadajournal.com
Received: 04-11-2019
Accepted: 06-12-2019

**ಎನ್.ಜಿ.ರಮೇಶ್**
ಆಯಿಷ್ ಬಡಾವಣೆ,
ಪ್ರಶಾಂತನಗರ, ಬೋಗಾದಿ ೨ನೇ
ಹಂತ, ಮೈಸೂರು

**Corresponding Author:**
**ಎನ್.ಜಿ.ರಮೇಶ್**
ಆಯಿಷ್ ಬಡಾವಣೆ,
ಪ್ರಶಾಂತನಗರ, ಬೋಗಾದಿ ೨ನೇ
ಹಂತ, ಮೈಸೂರು

# ಹೊಸಗನ್ನಡದಲ್ಲಿ ಶ್ರಾವಣ ಕಾವ್ಯ

**ಎನ್.ಜಿ.ರಮೇಶ್**

ಶ್ರಾವಣ ಪ್ರಕೃತಿ ಆಚರಿಸಿಕೊಳ್ಳುವ ಸಡಗರದ ಹಬ್ಬ. ನಾಡಿನ ಮೂಲೆ ಮೂಲೆಗಳನ್ನೂ ತೊಳೆದು ಹಸಿರು ತೋರಣದಿಂದ ಸಿಂಗರಿಸಿ, ಹೂವುಗಳ ರಂಗವಲ್ಲಿ ಇಟ್ಟು ನಲಿಯುವ ಸಂಭ್ರಮದ ನೆಂಟ ಶ್ರಾವಣ. 'ಒಂದೊಂದು ಋತುವಿನಲಿ ಒಂದೊಂದು ರೀತಿಯಲಿ ಸಂಸ್ಕಾರ ಪಡೆಯುವುದೆ ಜೀವಿಗಳ ಧರ್ಮ' ಎಂದ ಕವಿ ಎಸ್.ವಿ.ಪರಮೇಶ್ವರಭಟ್ಟರ ವಾಣಿಯಂತೆ ಇಡೀ ಜೀವ ಸಂಕುಲ ಶ್ರಾವಣ ಸಂಭ್ರಮದಲ್ಲಿ ಮೈಮರೆಯುತ್ತದೆ. ಚೈತ್ರ, ವೈಶಾಖಗಳ ಸಂಸರ್ಗದಿಂದ ಹೊಸ ಬದುಕಿಗೆ ನಾಂದಿ ಹಾಡುವ ಸಸ್ಯ ಸಂಕುಲ, ಜೇಷ್ಠ, ಆಷಾಡದ ತುಂತುರು ಮಳೆ, ಕುಳಿರ್ಗಾಳಿಗೂ ಸಡ್ಡು ಹೊಡೆದು ಜೀವ ಸಂಕುಲಕ್ಕೆ ಭರವಸೆಯ ಮಡಿಲಾಗುತ್ತದೆ ಈ ಶ್ರಾವಣ. ಭೂಮಿಯು ತನ್ನೆರಡು ಹೆಮ್ಮೆಯ ಸಂತತಿಗಳಾದ ಸಸ್ಯ ಮತ್ತು ಜೀವಸಂಕುಲಗಳಿಗೆ ಮಮತೆಯ ತುತ್ತನಿತ್ತು ಅಮೃತದ ವರ್ಷಧಾರೆಯಿಂದ ಸಲಹಿ ಸಂಭ್ರಮಿಸುವ 'ನಾಂದಿಪರ್ವ' ಈ ಶ್ರಾವಣ.

ನೂಲ ಹುಣ್ಣಿಮೆಯನ್ನು ಒಡನಾಡಿಯಾಗಿ ಕರೆತರುವ ಈ ಶ್ರಾವಣನಿಗೆ ಬಾದ್ರಪದ ಉತ್ತರಾಧಿಕಾರಿ. ತಂಪೆರೆಯುವ ಮುಂಗಾರು ಸೋನೆ ಮಳೆ, ಇರಲಿ ಇರಲಿ ಅನ್ನಿಸುವ ಹಿತವಾದ ಚಳಿ, ಆಗಾಗ ಬಂದು ಬೆಚ್ಚಗೆ ಆವರಿಸಿ ಮುದ್ದಿಸುವ ಎಳೆ ಬಿಸಿಲು, ಎಲ್ಲೆಲ್ಲೂ ಹೂವ ತೋರಣ, ಹಸಿರು ಚಪ್ಪರ, ಹಸಿರು ಹಾಸಿನ ಮೇಲೆ ಶ್ರಾವಣನ ಮೆರವಣಿಗೆ. 'ಬಂದಾ ಶ್ರಾವಣ' 'ಶ್ರಾವಣ ಬಂತು ಕಾಡಿಗೆ, ನಾಡಿಗೆ, ಬೀಡಿಗೆ' ಎಂದು ಆಗಾಗ ಕನವರಿಸುವ ವರಕವಿ ಬೇಂದ್ರೆಗೆ 'ಮತ್ತೆ ಬಂತು ಶ್ರಾವಣ' 'ಮತ್ತೆ ಬಂದಾ ಶ್ರಾವಣ' ಎಂಬ ಸಂಭ್ರಮ ತುಂಬಿ, ಹಲವಾರು ಕವಿಗಳನ್ನು ಮೈಕೊಡವಿ ಎಚ್ಚರಿಸಿದ ಫಲಭರಿತ, ಕೆನೆ ಭರಿತ ಮಾಸ ಶ್ರಾವಣ. ಮಾತ್ರವಲ್ಲ, ಸೃಷ್ಠಿಯ ಹಲವು ಚಮತ್ಕಾರಗಳಿಗೆ ಸಾಕ್ಷಿಯಾಗುವ ಮಾಸವೂ ಕೂಡ.

ಶ್ರಾವಣನ ಆಗಮನದೊಂದಿಗೆ ಸಾಲುಗಟ್ಟಿ ಬರುವ ಹಬ್ಬಗಳು ನಮ್ಮ ನಾಡಿನ ವೈವಿಧ್ಯ ಸಂಸ್ಕೃತಿಯ ಶ್ರೀಮಂತ ಪರಂಪರೆಯ ಪ್ರತೀಕವಾಗಿವೆ. ಇಂತಹ ಶ್ರಾವಣ ಕನ್ನಡ ಕಾವ್ಯ ಜಗತ್ತಿನ ಮಟ್ಟಿಗೆ ಬೇಂದ್ರೆಯವರನ್ನು ಕಾಡಿದಷ್ಟು ಮತ್ಯಾವ ಕವಿಯನ್ನೂ ಕಾಡಲಿಲ್ಲ ಎಂಬುದೇ ಇದುವರೆಗಿನ ಸಾಮಾನ್ಯ ತಿಳುವಳಿಕೆ. ಆದರೆ, ಬದುಕನ್ನು ನೇರವಾಗಿ ನಿಯಂತ್ರಿಸುವ ನಮ್ಮ ಪ್ರಕೃತಿಯ ಸಂಭ್ರಮವಾದ ಶ್ರಾವಣ ಮಾಸ ಬದುಕಿನ ಬಗ್ಗೆ ಹೆಮ್ಮೆ ಮೂಡಿಸಿ, ನಿರಾಶೆ ಕಾಮೋಡಗಳ ಬದಿಗೊತ್ತರಿಸಿ ಭರವಸೆಯ ಬೀಜ ಬಿತ್ತುವ ಸಂದರ್ಭವಾಗಿ, ಹಲವು ಕವಿಗಳಲ್ಲಿ ವೈವಿಧ್ಯಮಯ ಅನುಭವ ಮತ್ತು ಆಯಾಮಗಳಲ್ಲಿ ಅನುರಣಿಸಿದೆ. ಅಂತಹ ಆಧುನಿಕ ಕನ್ನಡ ಕಾವ್ಯ ಜಗತ್ತಿನ ಪ್ರತಿನಿಧಿಗಳಾಗಿ ಇಲ್ಲಿ ಚರ್ಚೆಗೆ ಪ್ರಾತಿನಿಧಿಕವಾಗಿ ಆರಿಸಿಕೊಂಡ ಕವಿಗಳೆಂದರೆ, ಜಿ.ಎಸ್.ಶಿವರುದ್ರಪ್ಪ, ಪು.ತಿ.ನ, ವಿ.ಸೀ, ಚನ್ನವೀರ ಕಣವಿ, ವಿ.ಕೃ. ಗೋಕಾಕ್, ಜಿ.ಎಸ್.ಸಿದ್ಧಲಿಂಗಯ್ಯ, ಜಿ.ಎಚ್.ಹನ್ನೆರಡು ಮಠ, ಲೀಲಾ ಕುಲಕೋಟಿ ಮತ್ತು ಚಂದ್ರಶೇಖರ ಕಂಬಾರ. ಇವರ ವಿಭಿನ್ನ ದೃಷ್ಟಿಕೋನದಿಂದ ರಚಿತವಾದ ಕವಿತೆಗಳನ್ನು ಇಲ್ಲಿ ಪರಿಗಣಿಸಲಾಗಿದೆ. ಈ ಕವಿತೆಗಳಲ್ಲಿ ಗರಿಬಿಚ್ಚಿರುವ ಶ್ರಾವಣದ ರೀತಿಯ ಪರಿಚಯವೇ ಈ ಚರ್ಚೆಯ ವ್ಯಾಪ್ತಿ ಮತ್ತು ಮಹತ್ವ ಎಂದು ಭಾವಿಸಬಹುದಾಗಿದೆ.

ಬೇಂದ್ರೆಯವರ ಕಾವ್ಯದ ಸಂಭ್ರಮದ ನೆಲೆ ಎಂದೇ ಭಾವಿಸಲಾಗಿರುವ ಶ್ರಾವಣ, ಸಮಕಾಲೀನರಾದ ಹಲವು ಕವಿಗಳಲ್ಲಿ ಹಲವು ಅರ್ಥಗಳಲ್ಲಿ ರೂಪ ಪಡೆದಿದೆ. ಶ್ರಾವಣ ಮಾಸದ ನೆಲ ಮುಗಿಲುಗಳ ವರ್ತನೆಯನ್ನು ಕೆಲವು ಕವಿಗಳು ಕಟ್ಟಿಕೊಟ್ಟರೆ, ಬೇರೊಂದು ವಿಷಯದ ನಿರೂಪಣೆಯ ಸಂದರ್ಭಕ್ಕೆ ಶ್ರಾವಣವು ಆಲಂಕಾರಿಕ ಉಪಮೆ, ರೂಪಕವಾಗಿ ಮಾತ್ರ ಕೆಲವರಿಗೆ ಕಾವ್ಯವಸ್ತುವಿನ ಪೋಷಣೆಗೆ ಶ್ರಾವಣ ಬಳಕೆಯಾಗಿರುವ ನಿದರ್ಶನಗಳೂ ಇವೆ. ಶ್ರಾವಣದ ಮೊದಲು ಮತ್ತು ಶ್ರಾವಣದ ಆಗಮನದಿಂದ ಭೂಮಿಯಲ್ಲಾದ ಪರಿವರ್ತನೆಯನ್ನು ಬಿಂಬಿಸುವ ಕವಿತೆಗಳಿವೆ. ಇನ್ನು ಕೆಲವು

ಕವನಗಳು ಶ್ರಾವಣದ ಲಕ್ಷಣಗಳನ್ನು ಸಾಂದರ್ಭಿಕವಾಗಿ ಕಟ್ಟಿಕೊಡುವಂಥವು. ಪ್ರಕೃತಿ ಮತ್ತು ಮಾನವನ ಬದುಕನ್ನು ಆಳುವ ಶ್ರಾವಣನ ದರ್ಬಾರು ಇನ್ನು ಕೆಲವು ಕವಿತೆಗಳ ಜೀವಾಳ. ಆಷಾಡದ ನೀರಸ ಅನುಭವದಿಂದ ಬೇಸತ್ತು ಶ್ರಾವಣನನ್ನು ಸ್ವಾಗತಿಸಲು ಹಾತೊರೆಯುವ ಕವಿತೆಗಳಿವೆ. ದಿನ ದಿನವೂ ಹಬ್ಬದ ಔತಣ ನೀಡುತ್ತ ಬರುವ ಶ್ರಾವಣದ ಅನುಭವ ಹೊತ್ತ ಕವಿತೆಗಳಿವೆ. ಹಿತವಾದ ತುಂತುರು ಮಳೆಯ ಅಮೃತಧಾರೆಯನ್ನು ಸವಿಯುವ, ಹಲವು ಭಾವಗಳನ್ನು ಕೆರಳಿಸುವ ಮೋಡಗಳ ಮೇಲಾಟದ ನಿತ್ಯ ಸೊಬಗನ್ನು ಆಸ್ವಾದಿಸುವ ರಚನೆಗಳಿವೆ. ಅಪರೂಪದ ಅಭಿವ್ಯಕ್ತಿಯಾಗಿ ಶ್ರಾವಣನ ಸಂಭ್ರಮದ ಪರಿವೇ ಇಲ್ಲದೆ, ತಾತ್ವಾರದ ಬದುಕು ಸಾಗಿಸಲು ಹೋರಾಡುತ್ತಿರುವವರ ಚಿತ್ರಣವಂತೂ ಯಾವುದೋ ಒಂದು ಶ್ರಾವಣ ಸಂಜೆಯ ವಿಕೃತ ರೂಪವಾಗಿ ಕವಿ ಮನವನ್ನು ಕಲಕುವ ನಿದರ್ಶನಗಳಿವೆ. ಮತ್ತೊಂದೆಡೆ ಪರಂಪರೆಯಿಂದ ನಡೆದುಕೊಂಡು ಬಂದ ಶ್ರಾವಣದ ಆಚರಣೆಗಳ ಪಾವಿತ್ರ್ಯತೆಗೆ ಧಕ್ಕೆ ಒದಗಿರುವ ಬಗ್ಗೆ ಆತಂಕದ ನುಡಿಗಳಿವೆ. ಶ್ರಾವಣದೊಂದಿಗೆ ಅಂಟಿಕೊಂಡಿರುವ ಧಾರ್ಮಿಕತೆಯ ಸ್ಪರ್ಶವನ್ನು ತೆರೆದಿಡುವ ರಚನೆಗಳಿವೆ. ಇದು ಸ್ಥೂಲವಾಗಿ ಇಲ್ಲಿ ಆಯ್ದುಕೊಂಡಿರುವ ಕವಿತೆಗಳ ಶ್ರಾವಣದ ವಸ್ತು ವೈವಿಧ್ಯವಾಗಿದೆ.

ಶ್ರಾವಣ ಮಾಸದ ವಿಶಿಷ್ಟತೆಯನ್ನು ತಮ್ಮದೇ ಶೈಲಿಯಲ್ಲಿ ಹಿಡಿದಿಟ್ಟ ಹಲವಾರು ಕವನಗಳಿವೆ. ಆ ಪೈಕಿ ಶ್ರಾವಣನ ವೈಭವಕ್ಕೆ ದನಿಗೂಡಿಸಿ, ಇಲ್ಲಿ ಚರ್ಚಿತವಾಗುತ್ತಿರುವ ಕವಿತೆಗಳೆಂದರೆ, *ಪು.ತಿ.ನ.* ಅವರ 'ಶ್ರಾವಣ' ಮತ್ತು 'ಶ್ರಾವಣ ಪೂರ್ಣಿಮೆ', *ಜಿ.ಎಸ್.ಶಿವರುದ್ರಪ್ಪ*ನವರ 'ಆಷಾಡ', 'ಮಬ್ಬಿನಿಂದ ಮಬ್ಬಿಗೆ', 'ನನ್ನ ಪ್ರೀತಿ', 'ಶಾರದೆ', *ವಿ.ಸೀ.* ಅವರ 'ಮುಂಗಾರು', ಚಂದ್ರಶೇಖರ*ಕಂಬಾರರ* 'ಶ್ರಾವಣದ ಒಂದು ದಿನ', *ಚೆನ್ನವೀರ ಕಣವಿ*ಯವರ 'ಕಾರ್ತೀಕದ ಮೋಡ', 'ಶ್ರಾವಣ', 'ಶ್ರಾವಣದ ಒಂದು ಸಂಜೆ' *ಜಿ.ಎಸ್.ಸಿದ್ಧಲಿಂಗಯ್ಯ*ನವರ 'ಶ್ರಾವಣ' ಮತ್ತು 'ಶ್ರಾವಣದ ಮತ್ತೊಂದು ಚಿತ್ರ' ಸಿದ್ಧಲಿಂಗಪಟ್ಟಣಶೆಟ್ಟಿಯವರ 'ಸೆಳಕು', ವಿ.ಕೃ.ಗೋಕಾಕ್‌ರವರ 'ಗೆಲುವು', '*ಲೀಲಾ ಕಲಕೋಟಿ*ಯವರ 'ಶ್ರಾವಣದ ಸೆರಗು' ಹಾಗೂ *ಜಿ.ಎಸ್.ಹನ್ನೆರಡುಮಠ* ಅವರ 'ಸಸ್ಯ ಶ್ರಾವಣ'. ಇವುಗಳಲ್ಲಿ ಶ್ರಾವಣದ ಬೆಡಗನ್ನು ಚಿತ್ರಿಸುವ ಕವಿತೆಗಳು ಕೆಲವಾದರೆ, ಶ್ರಾವಣದ ಧಾರ್ಮಿಕ, ಆಧ್ಯಾತಿಕ ಮಹತ್ವ ಬಣ್ಣಿಸುವ ರಚನೆಗಳು ಹಲವು. ಮುಖ್ಯವಾಗಿ ಶ್ರಾವಣದ ಸಂಭ್ರಮವನ್ನು ಸವಿಯಲಾರದವರ ಅನವರತ ಬದುಕಿನೊಡನೆ ಹೋರಾಟಕ್ಕಿಳಿದವರನ್ನು ಚಿತ್ರಿಸಿರುವ ಸಾಮಾಜಿಕ ಕಳಕಳಿಯಿಂದ ಧ್ವನಿಪೂರ್ಣವಾಗಿರುವ ಒಂದೆರಡು ರಚನೆಗಳೂ ಇಲ್ಲಿವೆ. ಇವುಗಳಲ್ಲಿ ಕೆಲವು ಪೂರ್ಣ ಪ್ರಮಾಣದಲ್ಲಿ ಶ್ರಾವಣವನ್ನು ಒಳಹೊಕ್ಕು ಚಿತ್ರಿಸಿರುವ ರಚನೆಗಳಾದರೆ, ಮತ್ತೆ ಕೆಲವು ಬೇರೊಂದು ವಿಷಯದ ನಿರೂಪಣೆಗಾಗಿ ಆಂಶಿಕವಾವಾಗಿ ಶ್ರಾವಣವನ್ನು ಪ್ರತಿಮೆ ರೂಪಕವಾಗಿ ಬಳಸಿಕೊಂಡಿವೆ.

ಶ್ರಾವಣನ ಸ್ವಾಗತಕ್ಕೆ ಆಷಾಡದಲ್ಲಿಯೇ ವೇದಿಕೆ ಸಿದ್ಧವಾಗಿರುವ ಬಗ್ಗೆ ಜಿ.ಎಸ್.ಶಿವರುದ್ರಪ್ಪನವರ 'ಆಷಾಡ' ಕವಿತೆ ವಿಶಿಷ್ಟ ಹೊಳಹುಗಳನ್ನು ನೀಡುತ್ತದೆ. 'ರವಿಯಿಲ್ಲ, ಶಶಿಯಿಲ್ಲ, ಬೆಳಕೂ ಇಲ್ಲ, ಕತ್ತಲೂ ಇಲ್ಲ, ಎಲ್ಲ ಮೋಡಗಳ ಕೆಸರಲ್ಲಿ ಹೂತು ಹೋಗಿರುತ್ತವೆ ಎಂಬಂತೆ, ಸದಾ ಮೋಡ ಮುಸುಕಿರುವ ಆಷಾಡ ಜಡತ್ವದ ಸಂಕೇತವೇನೋ ಅನ್ನಿಸುವುದುಂಟು. ಸೈನಿಕರಂತೆ ಲಗ್ಗೆಯಿಡುವ ಮೋಡಗಳ ಸಾಲು, ಸುತ್ತ ನರಳುವ ನೆರಳುಗಳು, ಜೀವಿಗಳೋ ನಿರ್ಜೀವ ಛಾಯೆಗಳೋ ಎಂಬ ಒಗಟಂತೆ ಕಾಣುವ ಜಡತ್ವ ಅದು. ಪ್ರಕೃತಿಯ ಕ್ರಿಯಾಶೀಲತೆ ಮತ್ತು ಜಡತ್ವಗಳು ಹೇಗೆ ಮಾನವಾದಿ ಜೀವಿಗಳ ಚಟುವಟಿಕೆಗಳನ್ನು ಪ್ರೇರೇಪಿಸುತ್ತವೆ, ನಿಯಂತ್ರಿಸುತ್ತವೆ ಎಂಬುದಕ್ಕೆ ಈ ಆಷಾಡ ಮಾಸ ಸಾಕ್ಷಿ. ದುಗುಡದ ಪ್ರತಿನಿಧಿಗಳಾದ ಕಣ್ಣೀರಿನಂತೆ ಜಿನುಗುವ ಪಟ ಪಟ ಸೋನೆಯ ಮೇಳ. ಇಂತಹ ಸ್ಥಿತಿಯಲ್ಲಿ ಸಿಕ್ಕ ಲೋಕ, ಮೂಕವಾದಂತೆ, ಬೇಸರದ ಗೋರಿಯಾದಂತೆ ಕವಿಯ ಕಣ್ಣಿಗೆ ಗೋಚರಿಸುತ್ತದೆ. ಕವಿತೆಯ ಕೊನೆಯ ಚರಣದಲ್ಲಿ ಅವಸರದಿಂದ ಶ್ರಾವಣನನ್ನು ನೆನೆದು ಕಾತರಿಸುವ ಪರಿ ಇದು–

ಗಾಳಿಗಳ ಗೋಳಿನಲಿ ಮೋಡಗಳ ತುಮುಲದಲಿ
ಸೋನೆಗಳ ಮೇಳದಲಿ
ಸಿಕ್ಕಿ ನರಳುವ ಜಗಕೆ ಎಂದು ಬಿಡುಗಡೆಯಿಹುದೋ!
ಶ್ರಾವಣದ ಶ್ರೀ ಗೌರಿಯವತಾರವೆಂದಹುದೊ
ಎಂದು ಕಾದಿದೆ ಜೀವ ಗೂಡಿನೊಳಗೆ!
ಗರಿ ಮುದುರಿ ಕಣ್ಮುಚ್ಚಿ ಮೌನದೊಳಗೆ!

ಆಷಾಡದ ಇಡೀ ಚಿತ್ರಣವನ್ನು ಗಾಳಿ, ಮೋಡ, ಸೋನೆಗಳಲ್ಲಿ ಸಿಕ್ಕಿ ನರಳುವ ಲೋಕವೆಂದು ಚಿತ್ರಿಸುವ ಕವಿ ಥಟ್ಟನೆ ಹುಡುಕುವುದು ಇದಕ್ಕೆ ಪರಿಹಾರ, ಬಿಡುಗಡೆಯ ದಾರಿ. ಅದೇ ಶ್ರಾವಣದ ಶ್ರೀ ಗೌರಿಯ ಅವತಾರ ಎಷ್ಟು ಬೇಗ ಆಗುವುದೋ ಎಂಬ ತವಕ. ಶ್ರಾವಣ ಕೇವಲ ತಿಂಗಳಾಗದೆ ಕವಿಗೆ ಶ್ರೀ ಗೌರಿಯ ಅವತಾರದಂತೆ ಕಾಣುತ್ತದೆ. ತನ್ಮೂಲಕ ವರ್ಷದ ಯಾವ ದಿನದಲ್ಲಿ ಈ ಕವಿತೆ ಓದಿದರೂ ಶ್ರಾವಣ ಎಷ್ಟು ಬೇಗ ಬಂದೀತೋ ಎಂದು ಆಶಿಸುವಂತಹ ಮನಃಸ್ಥಿತಿಯನ್ನು ಸೃಷ್ಟಿಸುವುದೆಂದರೆ ಅತಿಶಯವಲ್ಲ. ಆಷಾಡದ ಬೆನ್ನಲ್ಲೇ ಅವತರಿಸುವ ಶ್ರಾವಣನ ಚಿತ್ರಣವನ್ನು ಆ ಸಂಭ್ರಮದ ಅನುಭವಗಳಲ್ಲಿ ಕಟ್ಟಿಕೊಟ್ಟಿರುವ ಹಲವು ಕವಿತೆಗಳಿವೆ:

ಆಷಾಢ ಬಂದು ಗುಡಿಸಿ ಹೋಯಿತು ತರಗು ಕೊಳೆ ಕಸ
ತೊಳೆದ ಹಸುರೇರುತಿದೆ
ರಂಗೋಲಿಯಿಕ್ಕಿವೆ ಹಳದಿ ಮಾಣಿಕ್ಯ ಪಚ್ಚೆ ಹೀರಕದ ಹೂ
ಮರ ಗಿಡ ತೋಪು ವನವನಾಂತರಗಳಲ್ಲಿ
ಬಣ್ಣ ಬಣ್ಣದ ನವಿಲುಗರಿ ಕೆದರಿ
ಕುಣಿದಿದೆ ಚೆಲುವು

ಎಂದು ಪ್ರಾರಂಭವಾಗುವ ಜಿ.ಎಸ್.ಸಿದ್ಧಲಿಂಗಯ್ಯನವರ ಶ್ರಾವಣ ಕವಿತೆ ಆಷಾಡದ ಗಾಳಿಯಿಂದಲೂ ಒದಗಿದ ಒಂದು ಸತ್ಕಾರ್ಯದ ಬಗ್ಗೆ ಸಕಾರಾತ್ಮಕವಾಗಿ ಸ್ಮರಿಸುತ್ತದೆ. ತರಗು, ಕಸ, ಕೊಳೆಗಳನ್ನು ಗುಡಿಸಿ ಸ್ವಚ್ಛ ಮಾಡಿದ ಆಷಾಡವನ್ನು ನೆನೆಯುತ್ತಾ ಅನಂತರ ಹಸಿರು ಹೂಗಳ ರಂಗೋಲಿಯಿಕ್ಕಿದ ಶ್ರಾವಣದ ಸೊಬಗನ್ನು ವರ್ಣಿಸುವ ರೀತಿ ವಿಭಿನ್ನವಾಗಿದೆ. ಬಿರು ಬಿಸಿಲಿಲ್ಲದ, ಗುಡುಗು ಸಿಡಿಲುಗಳಿಲ್ಲದ, ಎಲ್ಲೋ ಒಮ್ಮೊಮ್ಮೆ ಗುಡುಗಿದರೂ ಅಬ್ಬರಿಸದೆ, ಮೃದುವಾಗಿ ಮೃದಂಗ ನುಡಿಸಿದಂತೆ ಮಧುರ ಎನ್ನಿಸುವ ಗುಡುಗು ಶ್ರಾವಣದ ಮನೋಹರತೆಗೆ ಸಾಕ್ಷಿ. ಹೂವಿನಂಥಾ ಮಳೆ, ಹೂವಿನಂಥ ಬಿಸಿಲು, ಹೂವಿನಂತ ಮಿಂಚು, ಕಾಮನ ಬಿಲ್ಲುಗಳು ಹರಿದು ಬಂದು ನೆಲಕ್ಕೆ ಬಿದ್ದಿವೆ. ಜೊತೆಗೆ ನೆಲವನ್ನು ಅಪ್ಪಿದಂತಿರುವ ಬಾನು ಎಲ್ಲೆಲ್ಲೂ ಪುಳಕವನ್ನು ಮನದಲ್ಲೂ, ಭೂಮಿಯಲ್ಲೂ ಮೊಳಕೆಯನ್ನು ಮೂಡಿಸುತ್ತದೆಂಬ ಗ್ರಹಿಕೆ ವಿಶಿಷ್ಟ ದೃಷ್ಟಿಕೋನದಿಂದ ಕೂಡಿದೆ.

ಬಾನು ನೆಲವನ್ನಪ್ಪಿ
ಎಲ್ಲೆಲ್ಲೂ ಪುಳಕ
ಮೊಳಕೆ.
ಹೊಳೆ ತುಂಬಿ
ಕೆರೆ ತುಂಬಿ
ಮೈ ತುಂಬಿ ಕೊಂಡಿಹಳು
ಪೃಥಿವೀ.

ಕೇವಲ ಹೂಬಿಸಿಲು, ಗಾಳಿ ಮಳೆ ಕಾಮನ ಬಿಲ್ಲಿಗೆ ಕವಿತೆ ಸೀಮಿತವಾಗದೆ, ಸಮೃದ್ಧ ಮಳೆಯಿಂದ ಮೈತುಂಬಿಕೊಂಡ ಭೂಮಿಯ ಚಿತ್ರವನ್ನು ಕೆರೆ ಹೊಳೆಗಳ ಮೂಲಕ ಹಿಡಿದಿಟ್ಟ ರೀತಿ ಗಮನಾರ್ಹವಾಗಿದೆ. ಅದು ಕೇವಲ ನೀರಿನ ಸಮೃದ್ಧತೆಯಷ್ಟೇ ಅಲ್ಲ, ಭೂಮಿಯ ಫಲ ಸಮೃದ್ಧತೆಯನ್ನೂ ಪ್ರತಿನಿಧಿಸುತ್ತದೆ.

ಶ್ರಾವಣವನ್ನು ಕುರಿತ ಪು.ತಿ.ನ.ರವರ ಅಚ್ಚರಿ ವಿಶೇಷವಾಗಿದೆ. ಗೇಯತೆಯಿಂದ ಕೂಡಿದ ಅವರ 'ಶ್ರಾವಣ' ಕವಿತೆ ಪ್ರಕೃತಿಯಿಂದ ಧಾರ್ಮಿಕ ನೆಲೆಯತ್ತ ಸಾಗುತ್ತದೆ. ಬೆಳ್ಳಗೆ ಬೆಳಗುವ ಗೆಲುವಾದ ಹರುಷ ತುಂಬಿದ ಹಗಲು, ಸುಡುವೆನೆಂದು ಬರುವ ಚುರುಕಿನ ಬಿಸಿಲು, ಆ ಬಿಸಿಲನ್ನು ಹಾರಿಸುವ ತಣ್ಣನೆ ಗಾಳಿ, ಯಾವ ಕಾಲವಿದು, ಯಾರ ಪಾಳಿಯಿದು ಎಂಬ ಸೋಜಿಗ ಕವಿಯದು. ಅದಕ್ಕೆ ಶ್ರಾವಣವೇ ಉತ್ತರಿಸುತ್ತದೆ– ನನ್ನದೆಂದು. ಮತ್ತೊಂದು ಚಿತ್ರದಲ್ಲಿ ಕರಿ ಮುಗಿಲಿಗೆ ಬಾನಾಟ ಆಡಲು ಆಗಸವೆ ಬಯಲಾಗಿದೆ. ಸುರಿಯಲೋ ಬಿಡಲೋ ಎಂದು ಮುಗಿಲು ಚಂಚಲತೆ ತೋರುತ್ತಿದೆ. ಈ ನಿಸರ್ಗ ಚಿತ್ರದ ಜೊತೆಗೆ ಈ ಶ್ರಾವಣ ಮಾಸ ದೇವರ ದುಂದುಭಿ ಮೊಳಗುವ ಸಾಲು ಸಾಲು ಹಬ್ಬಗಳ ಕಾಲ. 'ಸೆರೆಯ ಕಳೆವ ಹರಿ ಹುಟ್ಟಿದ ತಿಂಗಳು' ಎಂದು ಸ್ಮರಿಸುವ ಕವಿ ಈ ಮಾಸವನ್ನು 'ಬಿಡುಗಡೆಯೊಳು ನೆಲ ನಲಿಯುವ ತಿಂಗಳು' ಎಂದು ವ್ಯಾಖ್ಯಾನಿಸುವುದು ಪೌರಾಣಿಕ ಹಿನ್ನೆಲೆಯಿಂದ ಧ್ವನಿಪೂರ್ಣವಾಗಿದೆ. ಹಾಗಾಗಿಯೇ ಶ್ರಾವಣ ಹಲವು ಧಾರ್ಮಿಕ ವಿಧಿ ವಿಧಾನಗಳಿಗೆ ಪ್ರಶಸ್ತವಾದುದಾಗಿದೆ. ಎಂಬ ನಂಬಿಕೆ ಭಾರತೀಯ ಸಂಸ್ಕೃತಿಯದು.

ತಳೆದಿಹುದಿದು ಋಷಿ ಕವಿಗಳ ಹರಕೆ
ಕೊನರಿದೆ ಶ್ರುತಿಗೂ ಬದುಕುವ ಬಯಕೆ
ಹೋಮ, ಹವನ ಋಷಿ ತರ್ಪಣ ಪೂಜೆ
ಎಳೆಯರ ಕೊರಲೊಳು ಮಂತ್ರಗಳೋಜೆ.

ಎಂಬ ಸಾಲುಗಳು ಶ್ರಾವಣದ ಮತ್ತೊಂದು ಅಪರೂಪದ ಮುಖವನ್ನು ದರ್ಶನ ಮಾಡಿಸುತ್ತವೆ. ನಿಸರ್ಗದತ್ತವಾದ ಸೊಬಗಿನ ಮಹತ್ವವಿರುವಷ್ಟೇ ಶ್ರಾವಣಕ್ಕೆ ಧಾರ್ಮಿಕ ಆಚರಣೆಯ ಹಿನ್ನೆಲೆಯೂ ಇರುವುದು ಅಷ್ಟೇ ಪ್ರಧಾನವಾದ ಅಂಶವಾಗಿದೆ. ಕವಿಯ ಮಾತಿನಂತೆ ಶ್ರಾವಣ ಎಂಬುದು 'ನಾಡು ಮಹಾತ್ಮರ ನೆನೆವ ದಿನಗಳು' ಎಂಬ ಮಾತು ಅದಕ್ಕೆ ಪೂರಕವಾದುದಾಗಿದೆ.

'ಶ್ರಾವಣ ಪೂರ್ಣಿಮೆ' ಎಂಬ ಪು.ತಿ.ನ ಅವರ ಮತ್ತೊಂದು ಕವಿತೆ ವಿಭಿನ್ನವಾದ ನೆಲೆಯಲ್ಲಿ ನಿಲ್ಲುತ್ತದೆ. ಪ್ರಾಕೃತಿಕ ನೆಲೆಯ ಶ್ರಾವಣವನ್ನು ಬಣ್ಣಿಸದೆ, ಶ್ರಾವಣದ ಆಚರಣೆಯಲ್ಲಿ ಈಚೆಗೆ ಉಂಟಾಗಿರುವ ಲೋಪಗಳಿಂದ ಅದರ ನಿಜವಾದ ಅರ್ಥ ದೂರಾಗಿದೆ ಎಂಬ ಅಸಾಮಾಧಾನ ಕವಿಯದು.

ಋಷಿಗಳೇ ಸಾಧುಗಳೇ ದಿವ್ಯಾನುರಕ್ತರೇ
ಮರಳುವಿರ ನಮ್ಮಿರವೊಳಾಸರೆಯ ಕಾಣದೆಯೆ
ಹರಸ ಬಂದವರಿಂದು? ನಿಮ್ಮಗಳ ಕಂಗಳಿನ
ಸುಷುಮೆಯಿಂ ತೋಯಿಸುತಲೆಮ್ಮೊಳಗ ಬೆಳಗದೆಯೇ?

ಸಾಧುಗಳ, ಋಷಿ ಮುನಿಗಳ, ದಿವ್ಯಾನುರಕ್ತರ ಸೇವೆಗೆ ಸಕಾಲವೆಂದು ಭಾವಿಸಿದ್ದ 'ಶ್ರಾವಣ ಪೂರ್ಣಿಮೆ' ಇಂದು ತನ್ನ ನಿಜ ಅರ್ಥ ಕಳೆದುಕೊಂಡಿದೆ. ಆಚರಣೆಗಳಲ್ಲಿ ಆಗಿರುವ ಅಪಚಾರ, ಆಚರಿಸುವವರ ಅಶ್ರದ್ಧೆಯಿಂದ ಹರಸಲು ಬಂದವರು ಭ್ರಮೆ ಹರಿದು ಮರಳುವ ವಿಕೃತ ಚಿತ್ರ ಶ್ರಾವಣದ ಜೊತೆಗೆ ಬೆಸೆದುಕೊಂಡಿದೆ ಎಂಬುದು ಪ.ತಿ.ನ. ಅವರ ಕೊರಗು.

ವಿ.ಸೀ. ಅವರ 'ಮುಂಗಾರು' ಕವಿತೆಯಲ್ಲಿ ವರ್ಷಧಾರೆಯ ವಿವಿಧ ಚಿತ್ರಣವಿದೆ. ಮಂದ ಮಾರುತನೊಡನೆ ಸೋನೆಯಾಗಿ ಜಿನುಗುವ ಶ್ರಾವಣದ ಮುಂಗಾರು ಒಮ್ಮೊಮ್ಮೆ ರೌದ್ರ ರೂಪ ತಾಳುವ ಚಿತ್ರವಿದು:

ಭೀಷ್ಮ ವರ್ಷಧಾರೆ! ಕಾರ್ಮುಗಿಲ ಸಿಡಿರೋಷ!
ದಿಗ್ಭಿತ್ತಿಯೊಡೆವಂತೆ ವಜ್ರ ನಿರ್ಘೋಷ!
ಬೇಸಗೆಯ ತೇಜಃ ಪ್ರಭಾವದಿಂ ಬಸಿರ್ವೊತ್ತ
ಶ್ರಾವಣದ ದುರ್ದಮ್ಯ ಮೇಘ ಮಾಲೆ!

ಹೀಗೆ 'ಏಂ ಭಯಂಕರ ಸಂದರ್ಭವೋ ಇದು ಕಾಣೆ' ಎಂದು ನಿಟ್ಟುಸಿರಿಡುವ ಕವಿ ಭೂಮ್ಯಂತರಿಕ್ಷಗಳ ಒಂದು ಮಾಡುವ ಶ್ರಾವಣನ ಮತ್ತೊಂದು ರೂಪದತ್ತ ಬೆಳಕು ಚೆಲ್ಲುತ್ತಾರೆ.

ಕಂಬಾರರ 'ಶ್ರಾವಣದ ಒಂದು ದಿನ' ಕವಿತೆ ಅಭಿವ್ಯಕ್ತಿಯ ದೃಷ್ಟಿಯಿಂದ ಗಮನಾರ್ಹ ರಚನೆ. ಶ್ರಾವಣ ಮಾಸದ ಬಿಡಿ ಬಿಡಿಯಾದ ಚಿತ್ರಗಳನ್ನು ಕಟ್ಟಿಕೊಡುತ್ತ ಸಾಗುವ ಕವಿತೆ ಭಾವನಾತ್ಮಕ ನೆಲೆಗೆ ಬಂದು ನಿಲ್ಲುತ್ತದೆ. ಮುಗಿಲ ಮುತ್ತುಗಳನ್ನು ಕರಿಮೋಡ ಚೆಲ್ಲಿಸಿದಾಗ ಅದು ನೆಲದ ಚಿಪ್ಪೊಳಗೆ ಬಿತ್ತು. ಆಗ ಧರೆಯೆದ್ದು ಕಣ್ಣರಳಿಸಿತು, ಈ ಹಳ್ಳ ಪೊದೆ, ಮರದ ಟೊಂಗೆಗಳಲ್ಲಿ. ಮನೆಯ ಕೈ ತೋಟ ಹೂಗಳಿಂದ ನಂದನವಾಯಿತು. ಬೇಲಿಯಲಿ ಮಳೆಬಿಲ್ಲು ಅರಳಿತು. ಹಸಿರು ಗಿಡಗಳು ತುದಿಗೆ ಹೂವ ಮುಡಿದು ದೀಪಾವಳಿಯಂತೆ ಸಿಂಗಾರಗೊಂಡವು. ಈ ಸಂದರ್ಭಕ್ಕೆ ಬಳಸಿರುವ 'ತೋಯ್ದು ಗದ್ದೆಯ ತಲೆಯ ಬಾಚಿ ಹೆಣೆಯಿತು ಗಾಳಿ' ಎಂಬ ಪ್ರತಿಮೆ ಶಕ್ತಿಯುತವಾಗಿದೆ. 'ಹರೆ ಬಂತು ಝುರಿ ತೊರೆಗು, ಹರಿಗೂ, ಚರಂಡಿಗೂ' ಎಂದು ಸಾಗುವ ಕವಿತೆ ಥಟ್ಟನೆ ತನ್ನ ರಮ್ಯತೆಯಿಂದ ವಾಸ್ತವಕ್ಕೆ ಮರಳುತ್ತದೆ.

ಬದಿಯ ಗುಡಿಸಿಲಿನಲ್ಲಿ ಅಳುವ ತೊಟ್ಟಿಲವೇಕೋ
ಚಿಗುರು ನಗೆ ನಕ್ಕು ಚಿಲಿಪಿಲಿಸಿ ತಂದ
ಮೊಲೆಯೂಡಿ ಅಂಗಾಲ ತೊಳೆದ ತಾಯೆದೆಯೊಲವು
ಜೋಗುಳವ ಹಾಡಿತ್ತು : ಕುಡಿಯೊ ಕಂದ.

ಒಂದು ರೀತಿಯಲ್ಲಿ ಶ್ಲೇಷೆಯಾಗಿ ನಿಲ್ಲುವ ಕಂಬಾರರ ಈ ಚರಣ ಶ್ರಾವಣದಿಂದ ಫಲಗಟ್ಟಿದ ಭೂಮಿಗೂ, ಗುಡಿಸಲಲ್ಲಿ ಕುಳಿತು ಹಾಲೂಡಿಸುವ ತಾಯಿಗೂ ಏಕ ಕಾಲದಲ್ಲಿ ಅನ್ವಯವಾಗುತ್ತದೆ. ತನ್ಮೂಲಕ ನಿಸರ್ಗದ ಯಾವುದೇ ಸೌಂದರ್ಯ, ಸಂಭ್ರಮಗಳು ನೋಡುವ ಕಣ್ಣನ್ನು ಮತ್ತು ಸವಿಯುವವರ ಮನಃಸ್ಥಿತಿಯನ್ನು ಅವಲಂಬಿಸುತ್ತವೆ ಎಂಬುದನ್ನು ಕವಿತೆ ಅತ್ಯಂತ ನಾಜೂಕಾಗಿ ಪ್ರತಿಪಾದಿಸುತ್ತದೆ.

'ಸಸ್ಯ ಶ್ರಾವಣ' ಎಂಬ ವಿಭಿನ್ನ ಆಯಾಮದ ಕವಿತೆ ಜಿ.ಎಚ್.ಹನ್ನೆರಡು ಮಠ ಅವರದು. ಪ್ರಕೃತಿ ಮತ್ತು ಮಾನವ ಒಟ್ಟಾಗಿ ಆಚರಿಸುವ ಶ್ರಾವಣದ ಸಂಭ್ರಮಕ್ಕೆ ಸೂತ್ರದಾರನಾದುದು ಸಸ್ಯ ಪ್ರಪಂಚ ಎಂಬ ಗ್ರಹಿಕೆ ಇವರದು.

ಸುತ್ತ ಹಸಿರೋ ಹಸಿರು ಕಡಲಿ ಹುಳ್ಳಿಯ ಪಯಿರೊ
ಹೂವು ಬಿಟ್ಟಿತು ಮಾವು ಶರಣು ಶರಣೊ
ಧೊಧೊ ಮಳೆಯಭಿಷೇಕ ಗುಡುಗು ಘಂಟಾನಾದ
ಗಡಿಬಿಡಿಯ ಪೂಜೇರಿ ಇಲ್ಲಿ ಇಲ್ಲೊ
ಪಕ್ಷಿಗಾನವೆ ಮಂತ್ರ ಬಿಸಿಲು ಕರಪುರ ದೀಪ
ಸಸ್ಯ ಶ್ರಾವಣ ಮಾಸ ಜಾತ್ರಿ ನೋಡೊ.

ಶ್ರಾವಣ ನಿಜ ಅರ್ಥದಲ್ಲಿ ಸಸ್ಯ ಸಂಕುಲದ ಜಾತ್ರೆಯ ಮಾಸ ಎಂದು ಪ್ರತಿಪಾದಿಸುವ ಅವರ ಇಡೀ ಕವಿತೆಯಲ್ಲಿ, ಮಳೆ ಗಾಳಿ ಎರಡಕ್ಕೂ ಅವಕಾಶವೇ ಇಲ್ಲದಂತೆ ಸಸ್ಯಗಳ ಮತ್ತು ಮಾನವನ ಸಂಬಂಧ ಚಿತ್ರಿಸಲ್ಪಟ್ಟಿರುವುದು ವಿಶೇಷ.

'ಶ್ರಾವಣದ ಸೆರಗು ಎಂಬ ಮತ್ತೊಂದು ಕವಿತೆ ಲೀಲಾ ಕುಲಕೋಟಿಯವರ ರಚನೆ. ಶ್ರಾವಣದ ಸೆರಗಿನಲ್ಲಿ ಏನೆಲ್ಲ ನಡೆಯಬಹುದೆಂಬುದೇ ವಸ್ತುವಾದರೂ ಪದ್ಯದೊಳಗಿನ ಲವಲವಿಕೆ ಕುತೂಹಲಕರವಾಗಿದೆ. 'ಶ್ರಾವಣದ ಸೆರಗಿನ್ಯಾಗ ಸುರಿಯುವ ಮಳ್ಯಾಗ' ಎಂಬ ಪ್ರಾರಂಭದ ಪಲ್ಲವಿ ಚರಣ ಚರಣಕ್ಕೂ ಅನುರಣಿಸಿರುವುದು ಕವಿತೆಯ ಪರಿಣಾಮವನ್ನು ಇಮ್ಮಡಿಗೊಳಿಸಿದೆ.

ಬಣ್ಣ ಬಣ್ಣದ ಹೂಗಳ
ರಸೋಲ್ಲಾಸದ ಸುಧೆಗೆ
ಚಿಟ್ಟೆ ದುಂಬಿಗಳ ದೊಂಬರಾಟ

ಎಂಬ ವರ್ಣನೆ ಹಾಗೂ 'ಮಧುರ ಬಾಂಧವ್ಯಗಳ ಬರುವಿಕೆಯ ಹಬ್ಬ ಹರಿದಿನಗಳ ರಂಗಿನಾಟ' ಎಂಬ ಅವರ ಚಿಂತನೆ ಶ್ರಾವಣದ ಅಂತರಂಗವನ್ನು, ಬಹಿರಂಗಗಳನ್ನೂ ತೆರೆದು ತೋರುತ್ತವೆ.

ಶ್ರಾವಣದ ಸಂಭ್ರಮದ ಆಗಮನಕ್ಕೆ ಸಿದ್ಧವಾಗಿ ನಿಂತು ಶ್ರಾವಣನನ್ನು ಬರಮಾಡಿಕೊಳ್ಳುವ ಭೂಮಿಯನ್ನು ಕವಿ ಜಿ.ಎಸ್. ಶಿವರುದ್ರಪ್ಪನವರು 'ಶಾರದೆ' ಎಂದು ಕರೆಯುತ್ತಾರೆ. ಭೂಮಿಯೊಂದಿಗಿನ ಎಲ್ಲ ಋತುಗಳ ವೈಶಿಷ್ಟ್ಯವನ್ನು ತೆರೆದಿಡುತ್ತಾ ಸಾಗುವ ಕವಿತೆ, ಚೈತ್ರದ ಪ್ರಸನ್ನತೆ ಹಾಗು ಆಷಾಡದ ನೀರವ ನಿರುತ್ಸಾಹ ಬಳಿಕ ಭೂಮಿಯ ಮೇಲಿನ ಶ್ರಾವಣದ ಸಡಗರವನ್ನು ಚಿತ್ರಿಸುತ್ತದೆ.

ಶ್ರಾವಣ ಬಂತು ಶ್ರಾವಣ
ಇವಳು ಉಸಿರಾಡಿದರೆ ಹಸಿರು, ಮಾತಾಡಿದರೆ ಜುಳು ಜುಳು;
ಹೆಜ್ಜೆ ಇಟ್ಟರೆ ಹೂವು; ತುರುಬಿನ ತುಂಬ ಮಲ್ಲಿಗೆ ಮೊಡ!

ಇಡೀ ಶ್ರಾವಣದ ಮೈಮಾಟವನ್ನು ಕಟ್ಟಿಕೊಡುವ ಮೂರ್ತ ರೂಪ ಕಣ್ಣಿಗೆ ಕಟ್ಟುತ್ತದೆ. ಹಸಿರು, ಮಾವು, ಹೂವು, ಮೋಡ, ಮಲ್ಲಿಗೆ, ಗೌರಿ, ಶಾರದೆ, ಇವು ಕವಿ ಕಣ್ಣಲ್ಲಿ ಶ್ರಾವಣನ ಅವತಾರದ ವಿವಿಧ ರೂಪಗಳು.

ಜಿ.ಎಸ್.ಶಿವರುದ್ರಪ್ಪನವರ 'ಮಬ್ಬಿನಿಂದ ಮಬ್ಬಿಗೆ' ಸಾಂದರ್ಭಿಕವಾಗಿ ಶ್ರಾವಣದ ಬಗ್ಗೆ ನುಡಿಯುವ ಕವಿತೆ. ಇದು ಅತ್ಯಂತ ಸರಳವಾಗಿ ಶ್ರಾವಣದ ಚಿತ್ರವನ್ನು ಕಟ್ಟಿಕೊಡುತ್ತದೆ.

ಆಷಾಡದಾಗಸದ ಗಾಳಿ ಪಟಗಳ ಮೇಲೆ ವಿರಹಿ ಯಕ್ಷನ ಸುಯ್ಲು;
ಶ್ರಾವಣದ ಮಳೆ ಬಿಸಿಲು; ಗದ್ದೆಯಲಿ ತೆನೆದೂಗುತಿವೆ ಪೈರು;
ನೀಲಿಯಂಗಳದಲ್ಲಿ ಮೋಡ ಮಕ್ಕಳ ಕೇಕೆ.
ಬಿಳಲು ಬಿಡುತಿದೆ ವೃಕ್ಷ, ಟೊಂಗೆ ಟೊಂಗೆಯ ತುಂಬ
ಹಕ್ಕಿ ತೊಟ್ಟಿಲ ಕಟ್ಟಿ ಜೋಗುಳವ ಹಾಡುತಿವೆ;

ಶ್ರಾವಣದ ಸಾಧಾರಣ ಚಿತ್ರಣದಂತೆ ಕಾಣುವ ಕವಿತೆಯ ಈ ಚರಣ ಆಲಂಕಾರಿಕ ಅಭಿವ್ಯಕ್ತಿಯಿಂದಾಗಿ ಗಮನ ಸೆಳೆಯುತ್ತದೆ. 'ಮೋಡ ಮಕ್ಕಳ ಕೇಕೆ' ಎಂಬ ರೂಪಕಾಲಂಕಾರ, 'ಟೊಂಗೆ ಟೊಂಗೆಯ ತುಂಬ ಹಕ್ಕಿ ತೊಟ್ಟಿಲ ಕಟ್ಟಿ ಜೋಗುಳವ ಹಾಡುತಿವೆ' ಎಂಬ ಪ್ರತಿಮೆಗಳು ಕವಿತೆಯ ಸಾಂದ್ರತೆಯನ್ನು ಹೆಚ್ಚಿಸಿವೆ, ಶ್ರಾವಣದ ಸೂಕ್ಷ್ಮ ಅನುಭವಗಳನ್ನು ಹಿಡಿದಿಟ್ಟಿವೆ.

ಪ್ರಕೃತಿಯಲ್ಲಿ ಬಂದು ಹೋಗುವ ಕತ್ತಲು ಬೆಳಕಿನಂತೆ ಮಾನವನ ಬದುಕಿನಲ್ಲೂ ಏರಿಳಿತಗಳು, ನೆರಳು ಬೆಳಕಿನಾಟಗಳು ಸಹಜ ಎಂದು ಪ್ರತಿಪಾದಿಸುವ ವಿ.ಕೃ.ಗೋಕಾಕರ ಕವಿತೆ 'ಗೆಲುವು'.

ಶ್ರಾವಣವನ್ನು ಈ ಕವಿತೆಯಲ್ಲಿ ಬದುಕಿನ ಸಂಭ್ರಮದ ದಿನಗಳಿಗೆ ಸಂವಾದಿಯಾಗಿ ಬಳಸಲಾಗಿದೆ. ಅಂತಹ ಶ್ರಾವಣವೂ ಕೂಡ ಅದರ ಸಂಭ್ರಮಗಳ ಆಚೆಗಿನ ಯಾವುದೋ ಸಾಧನೆಗಾಗಿ ಈ ಎಲ್ಲಾ ಆಕರ್ಷಣೆಯ ಮೂಲಕ ಹೊಂಚು ಹಾಕುತ್ತಿದೆ ಎಂಬುದು ಕವಿಯ ವ್ಯಾಖ್ಯಾನ:

ನೋಡು ಗೆಳೆಯ ಶ್ರಾವಣವಿದು
ಹೊಸ ಹೊಂಚನು ಹಾಕುತಿದೆ.
ಬಿತ್ತಿರುವುದ ಬೆಳೆಯಲೆಂದು
ಗಾಳಿ ಮಳೆಯು ಜೀಕುತಿದೆ.
ಅದರಂತೆಯೆ ಎದೆಯುದ್ದಕೆ
ಹೊಲದ ನಿಲುವು ತೂಗುತಿದೆ.
ಕಾರ್ಗಾಲದ ಹೊಸ ಹೊಂಚಿದು
ಕಾಲ ಪುರುಷನೊಳಸಂಚಿದು....
ನೋಡು ಗೆಳೆಯ ಶ್ರಾವಣವಿದು
ಹೊಸ ಹೊಂಚನು ಹಾಕುತಿದೆ.

ಶ್ರಾವಣದ ಸಿರಿಗೆ ಹೊಸ ನೆಲೆಯ ಅರ್ಥ ಹುಡುಕುವ ಹೊಸ ಆಯಾಮದ ಚಿಂತನೆಯ ಪರಿ ಇದು. ಬಿತ್ತಿದ್ದನ್ನು ಬೆಳೆಯುವ, ಅದಕ್ಕಾಗಿ ಗಾಳಿ ಮಳೆ ಜೀಕುವ, ಮಳೆಗಾಲವೂ ಸಂಚು ಮಾಡುವ ಇದು, ಕಾಲ ಪುರುಷನ ಒಳ ಸಂಚು ಎಂಬುದು ಕವಿಯ ವ್ಯಾಖ್ಯಾನ. ಇಂದನ್ನು ಕಳೆದುಕೊಂಡು ನಾಳೆಗೊಂದು ಹೊಸ ರೂಪ ತಾಳಲು ಪ್ರಕೃತಿಯೂ ಸದಾ ಹೊಂಚು ಹಾಕುತ್ತದೆ ಎಂದು ಕವಿತೆಯ ಆಂತರ್ಯವನ್ನು ಸರಳೀಕರಿಸಬಹುದು.

ಪ್ರೇಮ ಕವಿತೆಗಳಲ್ಲಿ ಶ್ರಾವಣದ ಮನಮೋಹಕತೆಯನ್ನು, ನಿಸರ್ಗದ ವೈಖರಿಗಳನ್ನು ಸಾಂದರ್ಭಿಕವಾಗಿ ಬಳಸಿಕೊಂಡ ಕವಿ ಸಿದ್ಧಲಿಂಗಪಟ್ಟಣಶೆಟ್ಟಿಯವರು. ಅವರ 'ಸೆಳಕು' ಕವನದಲ್ಲಿ

ಶ್ರಾವಣದ ಸೆಳಕುಗಳು ಗಾಳ್ಯಾಗ ಹರದಾಂಗ
ತಡತಡದ ಬರತೈತಿ ನೆನಪ ನನಗ...

*ಎಂಬ* ಉಪಮೆ, ಆಗಾಗ ಗಾಳಿಯೊಂದಿಗೆ ತೂರಿ ಬರುವ ಶ್ರಾವಣದ ತುಂತುರು ಹನಿಗೆ ನೆನಪನ್ನು ಸಮೀಕರಿಸುವ ಮೂಲಕ ಶಕ್ತಿಯುತ ಹೋಲಿಕೆಯೇ ಅನ್ನಿಸುತ್ತದೆ. ಅಂತೆಯೇ ಜಿ.ಎಸ್. ಶಿವರುದ್ರಪ್ಪನವರ 'ನನ್ನ ಪ್ರೀತಿ' ಕವಿತೆಯ ಸಾಲುಗಳಾದ

ಇಲ್ಲ, ನನ್ನ ಪ್ರಿತಿಯೊಳಿಲ್ಲ ಮಹತ್ವಾಕಾಂಕ್ಷೆ
ಬೇಡ ಕಂಭದ್ರೋಣ ಮುಸಲ ಧಾರೆ,
ಶ್ರಾವಣದ ಸದ್ದುಗದ್ದಲವಿರದ ಸೋನೆ ತುಂತುರಿಗೆ
ಗರಿಗೆದರಿ ನಲಿಯುವುದು ಹಸಿರು ಗದ್ದೆ.

ಪ್ರೀತಿ ಭೋರೆಂದು ಅಬ್ಬರಿಸಿ ಸುರಿಯುವ ಜಡಿ ಮಳೆಯಲ್ಲ. ಶ್ರಾವಣದಲ್ಲಿ ಬರುವ ಸದ್ದು ಗದ್ದಲವಿರದ ತುಂತುರು ಸೋನೆಯಂತೆ ಎಂಬ ಕಲ್ಪನೆ ಮನಮುಟ್ಟುವಂತಿದೆ. ಅದು ನೆನೆದರೂ ನೆನೆಯದಂತಿರುವ, ನೆನೆಯ ಬೇಕೆನಿಸುವ ಪ್ರೀತಿಯಂಥ ಮಳೆ. ಅದೇ ರೀತಿ ಕಣವಿಯವರ 'ಕಾರ್ತೀಕದ ಮೋಡ' ಕವಿತೆಯಲ್ಲಿ

ಸಾಂದರ್ಭಿಕವಾಗಿ ಬಂದೊದಗುತ್ತದೆ ಶ್ರಾವಣ. ಕಾರ್ತೀಕದ ಮುಂಚಿನ ತಿಂಗಳು ಎಂಬ ಕಾರಣಕ್ಕಾಗಿ ಮಾತ್ರ ಈ ಪ್ರಯೋಗ ಬರದೆ, ಪ್ರೀತಿಯ ರೀತಿಗೆ ಬಲವಾಗಿ ದನಿಗೂಡಿಸುತ್ತದೆ.

ಒಂದರ ಹಿಂದೊಂದು ಪರದೆ ಹಿಡಿದು, ಬಾನೆಲ್ಲ
ಮುಸುಕಿ, ಹಿಟ್ಟು ಸೋಸಿದ ಹಾಗೆ ಹನಿ ಜಿನುಗುತ್ತ
ಗಾಳಿಗೊಂದೇ ಸಮನೆ ಉಸಿರು ಬಿಡದಂತೋಡಿ–
ಶ್ರಾವಣದ ಮೋಡದ ರೀತಿ: ಅವಸರದ ಪ್ರೀತಿ.

ಶ್ರಾವಣದ ಮೋಡವನ್ನು ಬಣ್ಣಿಸುತ್ತಾ ಆರಂಭವಾಗುವ ಈ ಕವಿತೆ ಥಟ್ಟನೆ ಶ್ರಾವಣದ ಮೋಡದ ರೀತಿ; ಅವಸರದ ಪ್ರೀತಿ ಎಂಬ ಅನಿರೀಕ್ಷಿತ ಹೋಲಿಕೆಯೊಂದಿಗೆ ಅದರ ವೈಶಾಲ್ಯತೆಯನ್ನು ತಾನೂ ಪಡೆಯುತ್ತದೆ.

ಶ್ರಾವಣದ ಸಾಂದರ್ಭಿಕ ಲವಲವಿಕೆಗಿಂತ ವಿಶಿಷ್ಟ ರೀತಿಯಲ್ಲಿ ಶ್ರಾವಣದ ಗಾಂಭೀರ್ಯವನ್ನು ಕಟ್ಟಿಕೊಡುವ ಕವಿತೆ ಜಿ.ಎಸ್.ಸಿದ್ಧಲಿಂಗಯ್ಯನವರ 'ಶ್ರಾವಣದ ಮತ್ತೊಂದು ಚಿತ್ರ'. ಚೈತ್ರದ ಚಿಗುರು, ಹೊಗರಿನ ಚಕ್ಕಂದ ಮುಗಿದು, ಸುಡುಬಿಸಿಲ ಸೋಮಾರಿ ಬತ್ತಲೆ ಬಾನಿಗೂ ಈಗ ಮುಸುಕೆಳೆಯಲಾಗಿದೆ. ಶರದದ ಋತುವಿನ ಮೋಡಗಳ ಚಿನ್ನಾಟ ಕಳೆದು ಹೋಗಿದೆ. 'ಈಗೇನಿದ್ದರೂ ಮಣ್ಣಿನಲ್ಲಿ ಪ್ರಾಣ ಕಣ್ದೆರೆಯಬೇಕು' ಎಂಬಲ್ಲಿಂದಲೇ ಕವಿತೆ ಹೊಸ ನೆಲೆಗೆ ಹೊರಳುತ್ತದೆ.ಹಾಗಾಗಿ ಶ್ರಾವಣವೆಂದರೆ, ಮಣ್ಣಿನಲ್ಲಿ ಬಿತ್ತಿದ ಪ್ರಾಣ ಕಣ್ದೆರೆಯಬೇಕು, ಮುಗಿಲು ಕಣ್ಬಿಡಬೇಕು, ಇನ್ನು ಸೃಷ್ಟಿಯದೆ ಕಾರ್ಯ, ವರುಣನದೇ ದರ್ಬಾರು ಎಂದು ಸಾಗುತ್ತದೆ ಕವಿತೆ.

ಚಳಿ ಕಾಯಿಸುವ ಮೋಡವಿಲ್ಲ
ಬೀಗಿ ಕುಣಿಯುವ ಬೆಡಗಿನ ಮುಗಿಲೂ ಇಲ್ಲ
ಬೆಚ್ಚಗೆ ಸೆರಗ ಮುಸುಕಿನಲಿ ಮೊಲೆಯೂಡುವ
ತಾಯೀಗ...

ಎಂಬ ವಿನೂತನ ಪರಿಕಲ್ಪನೆ ಮತ್ತು ಪರಿಭಾಷೆಯೊಂದಿಗೆ ಇಡೀ ಕವಿತೆ 'ಶ್ರಾವಣದ ಮತ್ತೊಂದು ಚಿತ್ರ' ಎಂಬ ಹೆಸರಿಗೆ ಅನ್ವರ್ಥವಾಗಿ ಮತ್ತಷ್ಟು ಧ್ವನಿಪೂರ್ಣವಾಗುತ್ತದೆ. ಶ್ರಾವಣದ ಫಲವತ್ತತೆಗೆ, ಸಮೃದ್ಧತೆಗೆ ಕವಿತೆ ವಿಭಿನ್ನ ನೆಲೆಯಿಂದ ದುಡಿಯುತ್ತದೆ.

ನಿಜ ಅರ್ಥದಲ್ಲಿ ಶ್ರಾವಣದ ಸಂಭ್ರಮದ ಜೊತೆ ಜೊತೆಗೆ ಸಾಮಾಜಿಕ ಕಳಕಳಿಯ, ತೀವ್ರ ವಾಸ್ತವಿಕ ಪ್ರಜ್ಞೆಯಿಂದ ಕೂಡಿದ ಕಣವಿಯವರ ಎರಡು ಕವಿತೆಗಳಿವೆ. ಅವರ 'ಶ್ರಾವಣ' ಕವಿತೆಯ ಆರಂಭ ಸಾಧಾರಣ ಚಿತ್ರದೊಂದಿಗೆ ಸಾಗುತ್ತದೆ.

ನೆತ್ತಿಯ ಮೇಲೆ ಸಮುದ್ರ ತೇಲಿದ ಹಾಗೆ ಮುಗಿಲು
ಸುರಿವ ಜಡಿಮಳೆ, ತುಂಬಿ ಹೊರಚೆಲ್ಲಿದುದ್ವೇಗ.
ಮನೆಮನೆಯು ನಡುಗಡ್ಡೆ, ಮನ–ದಿಗಂತಕೆ ದಿಗಿಲು.

ಇಂತಹ ಶ್ರಾವಣದ ದಿನ ದಿನದ ಹಬ್ಬ ಕವಿಗೆ ಮತ್ತೊಂದು ಕಣ್ಣು ತೆರೆಸುತ್ತದೆ. ಶ್ರಾವಣ ಎಂದರೆ ಇದಿಷ್ಟೇ ಅಲ್ಲ, ವಾಸ್ತವಕ್ಕೆ ಬಾ ಎಂದು ಕರೆ ಕೊಡುವ ಮೂಲಕ ಕವಿತೆ ಇದ್ದಕ್ಕಿದ್ದಂತೆ ಅನಿರೀಕ್ಷಿತ ತಿರುವು ಪಡೆದುಕೊಳ್ಳುತ್ತದೆ.

ಮುರುಕು ಜೋಪಡಿ, ಹರಕು ಚಿಂದಿ ಮಂದಿಯ ಬದುಕು.
ಕಂಡ ಕಂಡಲ್ಲಿ ಕೈಯೊಡ್ಡಿ ಕೇಳುವ ಪ್ರಶ್ನೆ–
ಪುಸ್ತಕವ ಬಿಟ್ಟು ವಾಸ್ತವದಿ ಉತ್ತರ ಹುಡುಕು.

'ಪುಸ್ತಕವ ಬಿಟ್ಟು ವಾಸ್ತವದಿ ಉತ್ತರ ಹುಡುಕು' ಎನ್ನುವ ಚಿಂತನೆಯೊಂದಿಗೆ, ಈ ಸಮಸ್ಯೆಗೆ ಸೃಷ್ಟಿ ನೀಡಿರುವ ಕೊಡುಗೆಯಾದ ಶ್ರಾವಣ ಕೇವಲ ವ್ರತ, ನಿಯಮ, ದೇವರ ಪೂಜೆಯಲ್ಲೇ ಮುಗಿಯ ಬೇಕೇ? ಎಂಬುದರ ಮೂಲಕ ರಮ್ಯ ಕವಿತೆಯೊಂದರ ಒಡಲನ್ನು ಬೇಧಿಸಿಕೊಂಡು ಕವಿತೆಯ ಆಶಯ ಸಮಾಜದ ದೀನ ದುರ್ಬಲರ ಪಾಲಿನ ನಿಜವಾದ ಶ್ರಾವಣವನ್ನು ಹುಡುಕತೊಡಗುತ್ತದೆ.

ಕಣವಿಯವರ 'ಶ್ರಾವಣ' ಮತ್ತು 'ಶ್ರಾವಣದ ಒದು ಸಂಜೆ' ಕವಿತೆಗಳ ಆಶಯ ಒಂದೇ ಆದರೂ ಅದರಿಂದ ಹೊರಡುವ ಧ್ವನಿಗಳು ಅದಕ್ಕೂ ಮೀರಿದ ಬೇರೇನೋ ಹೇಳಲು ಹಾತೊರೆಯುತ್ತದೆ. ಬಾನೆಲ್ಲ ಮೋಡದ ಮುಸುಕು, ಸಣ್ಣಗೆ ಹಿಡಿದು ಬಿಟ್ಟ ತುಂತುರು ಮಳೆ, ದುರಸ್ತಿ ಕಾಣದ ರಸ್ತೆ – ಗುಂಡಿಗಳ ತುಂಬ ರಾಡಿ ನೀರು, ಗಾಳಿ ಬೀಸಿ ಮೋಡ ಚದುರಿದರೆ ಬರುವ ಒಂದಿಷ್ಟು ಹೂಬಿಸಿಲು, ಕೋಣೆಯ ಮೂಲೆಗಳಲ್ಲಿ ಕಾಣಿಸುವ ಜೇಡನ ಬಲೆ, ಗಾಳಿಗೆ ಚೌರಿ ಬೀಸಿ ಸೋತ ತೆಂಗಿನ ಗರಿ, ತುತ್ತ ತುದಿಯಲ್ಲಿ ಕುಳಿತ ಬಣ್ಣದ ಹಕ್ಕಿ, ಬಯಲಲ್ಲಿ ಶ್ರಾವಣದ ಹುಲ್ಲು ಮೇಯುವ ಎಮ್ಮೆಗಳ ಹಿಂಡು, ಬೇಲಿಗೆ ಎಗರಿ ಬಾಯಿಟ್ಟು ಗಪಗಪ ತಿನ್ನುವ ಆಡುಗಳು. ಗೆಜ್ಜೆ ಕಟ್ಟಿ ನಿಂತ ಗಿಡ್ಡ ಗೌರಿ ಗಿಡದ ಸಾಲು, ರಾತ್ರಿಯಲ್ಲರಳಿ ಮುಂಜಾನೆ ಮುದುಡಿದ ಬ್ರಹ್ಮ ಕಮಲ, ಹೊರಗೆ ಹೊರಟ ಕ್ಷಣವೇ ಹೇಳಿ ಕಳಿಸಿದ ಹಾಗೆ ಹನಿದು ಜಿನುಗುಡುವ ಮಳೆ...... ಹೀಗೆ ಶ್ರಾವಣದ ಒಂದು ಸಂಜೆಯ ಬಿಡಿ ಬಿಡಿ ಚಿತ್ರಗಳನ್ನು ಕಟ್ಟಿಕೊಡುವ ಕವಿತೆ, ಇದ್ದಕ್ಕಿದ್ದಂತೆ ತದ್ವಿರುದ್ಧ ಅನುಭವಗಳಿಗೆ ದನಿಕೊಡತೊಡಗುತ್ತದೆ.

ಅಲ್ಲೊಂದು ಕಡೆ ತಟಸ್ಥವಾಗಿದ್ದಾರೆ ಸಾಲಾಗಿ ಹೆಣ್ಣು ಗಂಡು,
ಮಕ್ಕಳು–ಮರಿ.
ಚಿಮಣಿ ಎಣ್ಣೆಗೆ ಕಾದು ರಸ್ತೆಯುದ್ದಕೂ.
ದೂರದರ್ಶನದಲ್ಲಿ ಓಡಾಡುತ್ತಾರೆ ಅವರು ಪಂಜು ಹಿಡಿದು
ಇವರು ಸೋತು ನಿಂತಿದ್ದಾರೆ ಕೈಯ್ಯಲ್ಲಿ ಖಾಲಿ ಡಬ್ಬಿ ಹಿಡಿದು.
ಮೇರಾ ಭಾರತ್ ಮಹಾನ್
ಬೀದಿ ದೀಪಗಳಲ್ಲಿ ಕೆಲವಾದರೂ ಹತ್ತಿಕೊಂಡಿವೆ.
ನಡುಕ ಹುಟಟ್ಟಿಸುವ ಚಳಿಗಾಳಿ, ಮತ್ತೆ ಇರುಳೆಲ್ಲ ಜಿಟಿಜಿಟಿ ಮಳೆ.

ಶ್ರಾವಣ ಎಲ್ಲರ ಪಾಲಿಗೂ ಹಸಿರು, ಅನುಭವಗಳ ಮಾಸವಲ್ಲ. ಇಡೀ ಪ್ರಕೃತಿಯನ್ನೇ ಮಳೆ, ಗಾಳಿಯಲ್ಲಿ ಅದ್ದಿ ತೆಗೆದ ಶ್ರಾವಣ, ಹಲವರ ಹಸಿವು, ಕತ್ತಲೆ, ಮೈತುಂಬ ಬಟ್ಟೆಯಿಲ್ಲದವರ, ಕಿತ್ತು ತಿನ್ನುವ ಚಳಿಗಾಳಿಯಿಂದ ಕೊರಗುವವರ ಆಕ್ರಂದನ, ಕಣ್ಣೀರುಗಳನ್ನು ತನ್ನೊಳಗೆ ಅಡಗಿಸಿಕೊಂಡಿದೆ. ಗಾಳಿಯಲ್ಲಿ ಅವರ ಆಕ್ರಂದನ ಕೇಳುತ್ತಿಲ್ಲ, ಮಳೆಯಲ್ಲಿ ಕಣ್ಣೀರು ಕಾಣುತ್ತಿಲ್ಲ.

ಸೌಂದರ್ಯದೊಳಗೊಂದು ವಿಕೃತಿ, ಸಂತಸದ ಒಡಲಲ್ಲಿ ಹೇಳಲಾಗದ ದುಗುಡ, ಹಾಡಿನ ಆಳದಲ್ಲಿ ಅವಿತು ನುಡಿಸುವ ಪಾಡು ಇರುವಂತೆ, ಶ್ರಾವಣದ ರಮ್ಯ ನೋಟದ ಹಿಂದಿರುವ, ವಿಭಿನ್ನ ಮುಖಗಳ ದರ್ಶನ ಮಾಡಿಸುವ ಇಂತಹ ಅಭಿವ್ಯಕ್ತಿ ನವೋದಯದ ನಂತರದ ಆಧುನಿಕ ಕಾವ್ಯದ ಶಕ್ತಿ ಎಂದು ಪರಿಭಾವಿಸಬಹುದಾಗಿದೆ. ಆಧುನಿಕ ಕಾಲಘಟ್ಟದಲ್ಲಿ ಇಂತಹ ಹಲವಾರು ಕವಿತೆಗಳು ಶ್ರಾವಣದ ಚಿತ್ರವನ್ನು ಬಗೆಬಗೆಯಾಗಿ ನಿರೂಪಿಸುತ್ತವೆ. ವೈಶಿಷ್ಟ್ಯಪೂರ್ಣವಾದ ಅನುಭವಗಳನ್ನು ಚಿತ್ರಿಸುತ್ತವೆ.

**ಪರಾಮರ್ಶನ ಗ್ರಂಥಗಳು**


೧. ಸುವರ್ಣ ಸಂಪುಟ (೧೨೦ ಕವಿಗಳ ಕವಿತೆಗಳು), ಸಂ: ಪು.ತಿ.ನ, ದೇಜಗೌ ಚೆನ್ನವೀರಕಣವಿ, ಹಾಮಾನಾ, ಪ್ರಭುಶಂಕರ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೮೦ಸಮಗ್ರಕಾವ್ಯ, ಜಿ.ಎಸ್.ಶಿವರುದ್ರಪ್ಪ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು–೨, ೨೦೦೯

೨. ಕಾವ್ಯ ವಿಲಾಸ, ಡಾ. ಆರ್. ಸಿ. ಹಿರೇಮಠ, ಪ್ರಸಾರಾಂಗ, ಡಾ. ಹಾಮಾನಾ, ಮೈಸೂರು ವಿಶ್ವವಿದ್ಯಾನಿಲಯ, ಡಾ.ಜಿ.ಎಸ್. ಶಿವರುದ್ರಪ್ಪ, ಮೈಸೂರು ಶ್ರೀ ಆರ್. ಅನಂತರಾಮು, ೧೯೭೨

೩. ಸಮಗ್ರ ಕಾವ್ಯ, ಚಂದ್ರಶೇಖರ ಕಂಬಾರ, ಸಪ್ನ ಬುಕ್‌ಹೌಸ್, ಬೆಂಗಳೂರು–೦೯ ೨೦೧೧

೪. ಕಣವಿ ಸಮಗ್ರ ಕಾವ್ಯ (೧೯೪೯–೨೦೦೨), ಸಂವಹನ, ಶಿವರಾಂಪೇಟೆ, ಮೈಸೂರು–೦೧ ೨೦೦೩

೫. ಪ್ರೊ.ಜಿ.ಎಸ್.ಸಿದ್ಧಲಿಂಗಯ್ಯನವರ ಸಮಗ್ರ ಕಾವ್ಯ, ಪ್ರೊ.ಜಿ.ಎಸ್.ಸಿದ್ಧಲಿಂಗಯ್ಯ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು–೪೦, ೨೦೦೧

೬. ಪಟ್ಟಣಶೆಟ್ಟಿ ಸಮಗ್ರ ಕಾವ್ಯ, ಡಾ.ಸಿದ್ಧಲಿಂಪಟ್ಟಣಶೆಟ್ಟಿ, ವೀರಶೈವ ಅಧ್ಯಯನ ಸಂಸ್ಥೆ, ಗದಗ ೨೦೦೦

೭. ನವ್ಯಕಾವ್ಯ ಭಾಗ–೧, ವಿ.ಕೃ.ಗೋಕಾಕ್, ಐಬಿಎಚ್ ಪ್ರಕಾಶನ, ಗಾಂಧಿನಗರ, ಬೆಂಗಳೂರು ೧೯೮

೮. ಶ್ರಾವಣದ ಸೆರಗು, ಲೀಲಾಕುಲಕೋಟಿ, ಕಣ್ವ ಪ್ರಕಾಶನ, ಬೆಂಗಳೂರು ೨೦೦೮

೯. *ಜಿ.ಎಸ್.ಹನ್ನೆರಡುಮಠ* ಅವರ 'ಸಸ್ಯ ಶ್ರಾವಣ'. ಪು.೩೭, ೧೯೮೮